ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 3709/2022

ಸಿ.ಡಬ್ಲ್ಯೂ-01
ಪಿ.ಡಬ್ಲ್ಯೂ-01

<u>ಸಾಕ್ಷಿಗೆ ದಿಃ **21.08.2024** ರಂದು ಪ್ರಮಾಣ ವಚನ ಬೋದಿಸಲಾಯಿತು.</u>

<u>**ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಎನ್.ಎ ವಕೀಲರಿಂದಃ**</u>

ನಾನು ಸಹ ಸಿಸಿ 3708/2022 ರ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇನೆ ಎಂದರೆ ಸರಿ. ನನ್ನ ಜೊತೆ ಚಾ.ಸಾ. 2 ಸಹ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದಾರೆ ಎಂದರೆ ಸರಿ. ನಮ್ಮ ಮನೆಯ ಹತ್ತಿರ ಗಲಾಟೆ ಆಗಿರುತ್ತದೆ. ಸದರಿ ಘಟನಾ ಸ್ಥಳದ ಚಕ್ಕುಬಂದಿ ಹೇಳಲ ಬರುವುದಿಲ್ಲ.  ನಮ್ಮ ಮನೆಯ ಅಕ್ಕಪಕ್ಕ ಚನ್ನಯ್ಯ ಮತ್ತು ಬುಕ್ಕಯ್ಯ, ಬೋರಯ್ಯ ಅವರ ಮನೆಗಳು ಇವೆ. ಗಲಾಟೆ ಆದಲ್ಲಿ ಈ ಮೇಲೆ ಹೇಳಿದ ಮನೆಯ ಸದಸ್ಯರುಗಳು ಕೇಳಿಕೊಳ್ಳುತ್ತಾರೆ ಎಂದರೆ ಸರಿ. ಗಲಾಟೆ ಆದಲ್ಲಿ ಈ ಮೇಲೆ ಹೇಳಿದ 3 ಮನೆಯವರಿಗೆ ಕೇಳುತ್ತದೆ ಮತ್ತು ಅವರ ಸಹ ನೋಡುತ್ತಾರೆ ಎಂದರೆ ಸರಿ.

ಸದರಿ ಗಲಾಟೆ ಆದಾಗ ಅಕ್ಕಪಕ್ಕದವರು ನೋಡಿರುತ್ತಾರೆ ಆದರೆ ಅವರ ಹೆಸರು ಹೆಳಲು ನನಗೆ ಬರುವುದಿಲ್ಲ. ಚಾ.ಸಾ. 3 ಮತ್ತು 4 ಅವರ ಮನೆಗೂ ಮತ್ತು ನಮ್ಮ ಮನೆಯೂ ದೂರ ಇರುತ್ತದೆ. ದೂರ ಇರುವ ಕಾರಣ ಚಾ.ಸಾ. 3 ಮತ್ತು 4 ಅವರಿಗೆ ನಮ್ಮ ಮನೆಯ ಹತ್ತಿರ ಆದ ಗಲಾಟೆ ಬಗ್ಗೆ ಗೊತ್ತಾಗುವುದಿಲ್ಲವೆಂದರೆ ಸರಿ. ಆರೋಪಿತರು ಉಪಯೋಗಿಸಿದ ಕಲ್ಲು ಕಾಡುಕಲ್ಲು ಆಗಿರುತ್ತದೆ.  ದೊಣ್ಣೆ ಆರೋಪಿ 1 ಮತ್ತು 2 ಅವರ ಕೈಯಲ್ಲಿತ್ತು. ದೊಣ್ಣೆಯ ಜಾತಿ ಯಾವುದೆಂದು ನಾನು ನೋಡಿರುವುದಿಲ್ಲ.

ದೊಣ್ಣೆ ಮತ್ತು ಕಲ್ಲನ್ನು ನೀವು ಪೊಲಿಸರಿಗೆ ನೀಡಿದ್ದೀರಾ ಎಂದರೆ ಸಾಕ್ಷಿ ಕಲ್ಲು ಬಿದ್ದಿದ್ದು ಪೋಲಿಸರು ಎತ್ತುಕೊಂಡಿರುತ್ತಾರೆ ದೊಣ್ಣೆಯನ್ನು ನೀಡಿಲ್ಲವೆಂದು ಹೇಳುತ್ತಾರೆ. ದೂರನ್ನು ಚಾ.ಸಾ.2 ಅವರು ಬರೆದಿರುತ್ತಾರೆ.  ದೂರಿನಲ್ಲಿ ಏನು ಬರೆದಿದ್ದಾರೆಂದು ಗೊತ್ತಿದೆಯಾ ಎಂದರೆ ಸಾಕ್ಷಿ ನನಗೆ ಹೇಳಿರುತ್ತಾರೆ ಎಂದು ಹೇಳುತ್ತಾರೆ. ಗಲಾಟೆ ಆದ ಎಷ್ಟು ದಿನಗಳ ನಂತರ ದೂರನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ಫಬ್ರವರಿ ತಿಂಗಳಲ್ಲಿ ಗಲಾಟೆ ಆಗಿದ್ದು 3 ನೇ

ತಿಂಗಳಲ್ಲಿ ದೂರನ್ನು ನೀಡಿದ್ದೇವೆ ಎಂದು ಹೇಳುತ್ತಾರೆ. ನ್ಯಾಯ ಪಂಚಾಯಿತಿ ಮಾಡುವುದಾಗಿ ಜಯರಾಮಯ್ಯ ಮತ್ತು ಅಪ್ಪಾಜಯ್ಯ ಹೇಳಿದ್ದರು. ನ್ಯಾಯ ಪಂಚಾಯಿತಿ ಯಾವ ಯಾವ ದಿನಾಂಕ ಆಗಿರುತ್ತದೆ ಎಂದರೆ ಸಾಕ್ಷಿ ನ್ಯಾಯ ಪಂಚಾಯತಿ ಮಾಡಲು ಯಾರು ಸೇರಿರುವುದಿಲ್ಲ ಎಂದು ಹೇಳುತ್ತಾರೆ. ದೂರಿನಲ್ಲಿ ನ್ಯಾಯ ಪಂಚಾಯತಿಗೆ ಕರೆದವರ ಹೆಸರು ಮತ್ತು ಬರದೆ ಇರುವವರ ಹೆಸರು ಬರೆದಿರುವುದಿಲ್ಲ.

ಹಲ್ಲೆ ಆದಾಗ ಮೈ ಮೇಲೆ ಬೆನ್ನಮೇಲೆ ಹೊಡೆದಿರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಬೆರಳು ಸಹ ಗಾಯ ಆಗಿತ್ತು ಎಂದು ಹೇಳುತ್ತಾರೆ. ಆರೋಪಿ 3 ರಿಂದ 5 ಸೇರಿಸಿ ನನಗೆ ಹೊಡೆದಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಬೆರಳಿಗೆ ರಕ್ತ ಗಾಯವಾಗಿತ್ತು. ನಾನು ಹು.ದುರ್ಗದಲ್ಲಿರುವ ಚಂದ್ರಶೇಖರ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಹು.ದುರ್ಗದಲ್ಲಿ ಸರಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ನಿಮ್ಮ ಊರಿನಿಂದ ನಿಡಸಾಲೆ ಗ್ರಾಮಕ್ಕೆ ಎಷ್ಟು ದೂರ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ನಿಡಸಾಲೆ ಗ್ರಾಮದಲ್ಲಿಯೋ ಸಹ ಸರಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ಸದರಿ ಆಸ್ಪತ್ರೆ ನಮ್ಮ ಊರಿನಿಂದ 2 ಕೀ.ಮಿ. ಅಂತರದಲ್ಲಿದ್ದು ಏನಾದರೂ ಆದರ ತೋರಿಸಬಹುದು ಎಂದರೆ ಸಾಕ್ಷಿ ನಾನು ಹೋಗಿಲ್ಲವೆಂದು ಹೇಳುತ್ತಾರೆ. ಹು.ದುರ್ಗ ನಮ್ಮ ಊರಿಗೆ 7 ಕೀ.ಮೀ ದೂರ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಹು.ದುರ್ಗ ಸರಕಾರಿ ಆಸ್ಪತ್ರೆಯಲ್ಲಿಯೂ ಸಹ ಚಿಕಿತ್ಸೆ ಪಡೆಯಬಹುದಾಗಿತ್ತು ಎಂದರೆ ಸಾಕ್ಷಿ ಹೌದು ನಾನು ಹೋಗಿಲ್ಲವೆಂದು ಹೇಳುತ್ತಾರೆ.

ನಾನು ಖಾಸಗಿ ಆಸ್ಪತ್ರಗೆ ಗಲಾಟೆ ಆದ ದಿನವೇ ಹೋಗಿರುತ್ತೇನೆ. ಹು.ದುರ್ಗದಲ್ಲಿ ಪೋಲಿಸರ ಠಾಣೆಯಲ್ಲಿ ಇದೆ ಎಂದರೆ ಸರಿ. ಒಂದು ವೇಳೆ ಗಲಾಟೆ ಆಗಿದ್ದರೇ ಅದೇ ದಿನವೇ ದೂರನ್ನು ನೀಡಬಹುದಿತ್ತು ಎಂದರೆ ಸಾಕ್ಷಿ ನಿಡಬಹುದಿತ್ತು ಆದರೆ ನ್ಯಾಯ ಪಂಚಾಯತಿ ಮಾಡುತ್ತೇವೆ ಎಂದು ಹೇಳಿದ್ದಕ್ಕೆ ನೀಡಿಲ್ಲವೆಂದು ಹೇಳುತ್ತಾರೆ. ನನಗೆ ಗಾಯವಾಗಿದ್ದಲ್ಲಿ ನಾನು ಅದೆ ದಿನ ದೂರನ್ನು ನೀಡುತ್ತಿದ್ದೇ ಮತ್ತು ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ ಗಲಾಟೆ ಮಾಡಿದ್ದು ಅವರಿಗೆ ತೊಂದರೆ ಕೊಟ್ಟಿದ್ದು ಅವರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಅವರು ದೂರನ್ನು ನೀಡಿದ ಬಳಿಕ ನಾನು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಗಲಾಟೆ ಆದ ಮಾರನೇ ದಿನ ಪೊಲಿಸರು ಸ್ಥಳಕ್ಕೆ ಬಂದಿರುತ್ತಾರೆ. ನನ್ನ ಪ್ರಕಾರ ಫೆಬ್ರವರಿ 17 ರಂದು ಆಗಿರುತ್ತದೆ. ಪೊಲಿಸರು ಗಲಾಟೆ ಆದ ಮಾರನೇ ಬಂದಿರುವುದಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮು. ಮಾ. ಅನ್ನು ನಾನೇ ಪೋಲಿಸರಿಗೆ ನೀಡಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಪೊಲಿಸರು ಸ್ಥಳಕ್ಕೆ ಬಂದಾಗ ಅಶೋಕ ಮತ್ತು ಸತಿ ಎನ್ನುವರು ಇದ್ದರು. ಆ ದಿನ ನನ್ನ ಸಹಿಯನ್ನು ಸಹ ಪಡೆದಿರುತ್ತಾರೆ. ಮಹಜರನಲ್ಲಿ ಏನು ಬರೆದುಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ.ಯಾವುದೇ ಘಟನೆ ನಡೆಯದಿದ್ದರೂ ಸಹ ಸುಳ್ಳು ದೂರನ್ನು ನೀಡಿ ಪೊಲಿಸ ಠಾಣೆಯಲ್ಲಿಯೇ ಪಂಚನಾಮೆಯನ್ನು ಬರೆಸಿ ಈ ದಿನ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.